ಆಗುತ್ತಿರುವ ಹಿಂಸೆಗಳು; ಉಗ್ರ ಬಲಪಂಥೀಯರು ಹಾಗೂ ಉಗ್ರ ಎಡಪಂಥೀಯರಿಂದ ನಡೆಯುತ್ತಿರುವ ಹಿಂಸೆಗಳು; ಹಿಂಸೆ ಹೊಸದನ್ನು ಸೃಷ್ಟಿಸುತ್ತದೆ ಎಂದು ನಂಬಿರುವ ಗುಂಪುಗಳು; ಸರ್ಕಾರಗಳೇ ಸೃಷ್ಟಿಸುತ್ತಿರುವ ಹಿಂಸೆಗಳು; ರಾಜಕೀಯ ಪಕ್ಷಗಳು ಮಾಡುತ್ತಿರುವ ಹಿಂಸೆಗಳು; ಕಾರ್ಪೊರೇಟ್ ವಲಯಗಳು ತಮಗೆ ಬೇಕಾದ್ದನ್ನು ವಶಪಡಿಸಿಕೊಳ್ಳಲು ಗುಡ್ಡಗಾಡು ಪ್ರದೇಶಗಳಲ್ಲಿ, ಗ್ರಾಮೀಣ ಇಂಡಿಯಾದಲ್ಲಿ ಮಾಡುತ್ತಿರುವ ಹಿಂಸೆಗಳು; ಡಿಜಿಟಲ್ ಮಾಧ್ಯಮಗಳಲ್ಲಿ ಬಿತ್ತಲಾಗುತ್ತಿರುವ ಕ್ರೂರ ಭಾಷೆ ಹಾಗೂ ದ್ವೇಷದ ಪ್ರಚೋದನೆಗಳು; ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಗಳು, ದಲಿತರ ದಮನ, ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ, ಯಾವುದೇ ಧರ್ಮ, ಜಾತಿಗಳ ಬಹುಸಂಖ್ಯಾತರ ದುರಹಂಕಾರಗಳು, ಜಾತೀಯ ಹಿಂಸೆಗಳು, ಗುಂಪು ಹಿಂಸೆಗಳು – ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಈ ಎಲ್ಲ ವಲಯಗಳೂ ಹಿಂಸೆಯನ್ನು ಸ್ಪಷ್ಟವಾಗಿಯೋ ಅಸ್ಪಷ್ಟವಾಗಿಯೋ ನಂಬಿವೆ, ಅವಲಂಬಿಸಿವೆ. ಇವು ಹಿಂಸೆಯನ್ನು ಮಾರ್ಗವನ್ನಾಗಿಯೂ ಬಳಸುತ್ತವೆ; ಕೆಲವೊಮ್ಮೆ ಸ್ಟ್ರ್ಯಾಟಿಜಿಕ್ ಅಸ್ತ್ರವನ್ನಾಗಿಯೂ ಬಳಸುತ್ತವೆ. ಅನೇಕ ರಾಜಕೀಯ ಪಕ್ಷಗಳು, ಮಾಧ್ಯಮಗಳು, ಸಂಘಟನೆಗಳು ನೇರವಾಗಿ ಹಿಂಸೆಯನ್ನು ಬೋಧಿಸದಿದ್ದರೂ ಜನರನ್ನು ಹಿಂಸೆಗೆ ಇಳಿಯಲು ಪ್ರಚೋದಿಸುತ್ತಲೇ ಇರುತ್ತವೆ. ಕುಮ್ಮಕ್ಕು ನೀಡುತ್ತಿರುತ್ತವೆ. ಇವು ತಮ್ಮ ಹಿತಾಸಕ್ತಿಗಳಿಗಾಗಿಯೂ ಹಿಂಸೆಯನ್ನು ಯೋಜಿಸುತ್ತಿರುತ್ತವೆ. ಎಷ್ಟೋ ಸಲ ಸರ್ಕಾರಗಳು ಕೂಡ ಜನತಾ ಚಳವಳಿಗಳು ಹಿಂಸಾವಿಧಾನಕ್ಕೆ ಇಳಿಯಲಿ ಎಂದು ಬಯಸುತ್ತಿರುತ್ತವೆ. ಹಿಂಸೆಯನ್ನು ಪ್ರಚೋದಿಸುವ ಬಾಡಿಗೆ ಜನರನ್ನು ಕಳಿಸಿ ಜನಪರ ಚಳವಳಿಗಳಲ್ಲಿ ಹಿಂಸೆಯನ್ನು ಸೃಷ್ಟಿ ಮಾಡಿಸುತ್ತಿರುತ್ತವೆ. ಕಾರ್ಪೊರೇಟ್ ಖಾಸಗಿ ವಲಯಗಳು ಹಳೆಯ ಕಾಲದ ಜಮೀನ್ದಾರರಂತೆ, ಫ್ಯಾಕ್ಟರಿ ಮಾಲೀಕರಂತೆ ಗೂಂಡಾಗಳನ್ನು ಛೂ ಬಿಡುತ್ತಿವೆ. ಇದೆಲ್ಲ ಎಲ್ಲರಿಗೂ ಗೊತ್ತಿದೆ.

ಇಷ್ಟೆಲ್ಲ ಇದ್ದರೂ, ಇವತ್ತು ಎದ್ದು ಕಾಣುತ್ತಿರುವ ಹಿಂಸಾಮಾರ್ಗಗಳ ಎದುರಿಗೆ ಗಾಂಧೀವಾದವನ್ನು ನಂಬಿದ ಅಥವಾ ಒಟ್ಟಾರೆಯಾಗಿ ಶಾಂತಿಯುತ ಪ್ರತಿಭಟನೆಯಲ್ಲಿ ನಂಬಿಕೆಯಿಟ್ಟಿರುವ ನೂರಾರು ಸಂಘಟನೆಗಳು ಇವತ್ತಿಗೂ ತಮ್ಮ ಹಾದಿಯಲ್ಲಿಯೇ ಮುಂದುವರಿಯುತ್ತಿವೆ. ಧರಣಿ, ಪಾದಯಾತ್ರೆ, ನಾಗರಿಕ ಅಸಹಕಾರ, ಉಪವಾಸ ಸತ್ಯಾಗ್ರಗಳ ಮೂಲಕ ತಂತಮ್ಮ ಹಕ್ಕೊತ್ತಾಯಗಳನ್ನು, ಪ್ರತಿಭಟನೆಗಳನ್ನು ನಡೆಸುತ್ತಿವೆ. ಈ ಬಗೆಯ ಪ್ರಜಾಪ್ರಭುತ್ವವಾದಿ ಸಂಘಟನೆಗಳು ತಮ್ಮ ಕಾರ್ಯಕ್ರಮವನ್ನು ಮುಕ್ತವಾಗಿ ಘೋಷಿಸುತ್ತವೆ. ಇವುಗಳಲ್ಲಿ ಗುಟ್ಟಾದ ಕಾರ್ಯಕ್ರಮಗಳಿಗೆ, ಸ್ಟ್ರ್ಯಾಟಿಜಿಕ್ ಹಿಂಸೆಗಳಿಗೆ ಅವಕಾಶವಿಲ್ಲ. ಹಿಂದೆ ರೈತಸಂಘವು ವಿದೇಶಿ ಬೀಜಗಳು ಹಾಗೂ ವಿದೇಶಿ ಸಂಸ್ಥೆಗಳ ವಿರುದ್ಧ ಉಗ್ರ ಪ್ರತಿಭಟನೆ ನಡೆಸಿದಾಗಲೂ ವ್ಯಕ್ತಿಗಳ ಮೇಲೆ ದಾಳಿ ನಡೆಸಲಿಲ್ಲ. ದಲಿತ ಸಂಘರ್ಷ ಸಮಿತಿ, ದಲಿತ ಸಂಘಟನೆಗಳು ಕೂಡ ಅಂಬೇಡ್ಕರ್ ಅವರು ಮಹಾಡ್ ಸತ್ಯಾಗ್ರಹದ ಸಂದರ್ಭದಲ್ಲಿ ಸ್ಪಷ್ಟವಾಗಿ ಎಚ್ಚರಿಸಿದಂತೆ ಹಿಂಸೆಗೆ ಇಳಿಯದಂತೆ ದಲಿತರನ್ನು ಸಂಘಟಿಸುತ್ತಾ ಬಂದಿವೆ.

ಅದೇ ರೀತಿಯಲ್ಲಿ, ಸಾವಿರಾರು ಜನ ಅಂಗನವಾಡಿ ಕಾರ್ಯಕರ್ತೆಯರು, ಕಾರ್ಮಿಕರು, ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆಗಳನ್ನು ಹೊತ್ತು ಬೆಂಗಳೂರಿಗೆ ಬರುವ ಸಂಘಟನೆಗಳು, ಸರ್ಕಾರಿ ನೌಕರರ ಸಂಘಟನೆಗಳು, ಇವತ್ತು ಜಿ.ಎಸ್.ಟಿ. ರದ್ದತಿಗಾಗಿ ಕುಶಲಕರ್ಮಿಗಳು ನಡೆಸುತ್ತಿರುವ ಹೋರಾಟಗಳು, ವಿದ್ಯಾರ್ಥಿ ಚಳವಳಿಗಳು, ಭೂ ಆಕ್ರಮಣದ ವಿರುದ್ಧ ದೊರೆಸ್ವಾಮಿಯವರ ನೇತೃತ್ವದಲ್ಲಿ ನಡೆದ ಹೋರಾಟಗಳು, ತಮ್ಮ ಗ್ರಾಮಗಳಲ್ಲಿ